ಇಡುವ ಸೌಂದರ್ಯವರ್ಧಕಗಳನ್ನು ಪ್ರಯತ್ನಿಸುತ್ತಲೇ ಇರುತ್ತಾರೆ.

'ಫ್ಯಾಷನ್' ಎಂಬ ಪದ ಯುವಜನತೆಯನ್ನು ಕಾಡಿದಷ್ಟು ಬೇರೆ ಯಾರನ್ನೂ ಕಾಡಿರಲಿಕ್ಕಿಲ್ಲ. ಅದು ಈಗ ಫ್ಯಾಷನ್, ಇದು ಈಗ ಫ್ಯಾಷನ್. ಹಾಗೆ ಮಾಡೋಣ, ಹೀಗೆ ಮಾಡೋಣ ಎಂದು ಪ್ರಯತ್ನಿಸುತ್ತಲೇ ಇರುತ್ತಾರೆ. ಜೊತೆಗೆ ತಮ್ಮ ಜೊತೆಗಿರುವವರನ್ನು ನೋಡಿ ಅವರಂತೆ ಮಾಡಬಯಸುವುದು. ಅವರಂತೆ ತಮ್ಮ ಉಡುಪು, ಅಲಂಕಾರ, ಮಾತು, ಹಾವಭಾವ ಎಲ್ಲವನ್ನೂ ಬದಲಾಯಿಸಿಕೊಳ್ಳುವುದು, ನಿರಂತರ ಸಾಗುತ್ತಿರುವ ಪ್ರಕ್ರಿಯೆ.

## ಸೌಂದರ್ಯಪ್ರಜ್ಞೆ ಎಂಬ ಚಿಂತನೆ



ಈ ಸೌಂದರ್ಯಪ್ರಜ್ಞೆ ಎಂಬ ಚಿಂತನೆಯನ್ನು ಸೌಂದರ್ಯ ವೃದ್ಧಿ, ಸೌಂದರ್ಯವರ್ಧಕಗಳಿಂದ ಸ್ವಲ್ಪ ಹೊರಳಿ ಅದರ ಇನ್ನೊಂದು ಮುಖದ ಕಡೆಗೆ ಚಿಂತನೆ ನಡೆಸಿದರೆ ಸೂಕ್ತವೇನೋ ಅನ್ನಿಸುತ್ತಿದೆ. ಸೌಂದರ್ಯ ಪ್ರಜ್ಞೆ ಮತ್ತು ಸಂಸ್ಕೃತಿ ಎರಡೂ ಜೊತೆ ಜೊತೆಗೆ ಸಾಗುವಂತಹ ವಿದ್ಯಮಾನಗಳು. ಒಂದು ಪ್ರದೇಶದ ಜನರ ಸೌಂದರ್ಯದ ಕಲ್ಪನೆ ಅಲ್ಲಿಯ ನೆಲದ ಸಂಸ್ಕೃತಿಯ ಮೇಲೆ ಅವಲಂಬಿತವಾಗಿರುವಂತಹದು. ಹಾಗಿದ್ದರೇ ಅದು ಸೌಂದರ್ಯ. ಹಾಗಾಗಿಯೇ ಸೌಂದರ್ಯದ ಕಲ್ಪನೆ ಪ್ರತಿ ಸಂಸ್ಕೃತಿಗೂ ಪ್ರತ್ಯೇಕವಾಗಿಯೇ ಇರುತ್ತದೆ. ಒಂದು ಊರಲ್ಲಿ ಸುಂದರ, ಚಂದ ಎಂದು ಪರಿಗಣಿಸಲಾದದ್ದು ಇನ್ನೊಂದು ಕಡೆಯಲ್ಲಿ ಇರುವುದಿಲ್ಲ. ಆದರೆ ಇಂದು ಏನಾಗುತ್ತಿದೆ? ವಿಶ್ವವೇ ಒಂದು ಹಳ್ಳಿ ಎಂಬ ಪರಿಕಲ್ಪನೆಯೇ ಮುಖ್ಯವಾಗಿರುವ ಇಂದಿನ ದಿನಮಾನದಲ್ಲಿ ಈ ವೈಶಿಷ್ಟ್ಯಗಳು ಉಳಿಯುವವೇ? ಹೌದು. ಇಂದು ನಮ್ಮ ಯುವಜನತೆಯ ಜೀವನ ಶೈಲಿಯೇ ಬದಲಾಗಿದೆ. ಚಿಂತನೆಗಳು ಬದಲಾಗಿವೆ. ಎಷ್ಟೋ ಸಂದರ್ಭಗಳಲ್ಲಿ ವಿಕಲ್ಪ ವೈಚಿತ್ರ್ಯಗಳೇ ಸೌಂದರ್ಯ ಎಂದು ನಂಬುವಷ್ಟು... ಹಾಗೇ ಬದುಕುವುದೇ ಚಂದ ಎನ್ನುವಷ್ಟು..... ಹರಿದ ಬಟ್ಟೆಗಳೇ ಸೌಂದರ್ಯವೆಂದರೆ? ಚಿತ್ರವಿಚಿತ್ರವಾಗಿ ಕತ್ತರಿಸಿಕೊಂಡ ಕೂದಲುಗಳೇ ಚಂದ ಎಂಬ ಭಾವ ಬೆಳೆದರೆ. ಅಡ್ಡಾದಿಡ್ಡಿ ಬೆಳೆಸಿಕೊಂಡ ಗಡ್ಡವೇ ಸ್ಟೈಲ್ ಎಂದಾಗುವುದಿದ್ದರೆ? ಮೈತುಂಬ ಹಾಕಿಸಿಕೊಳ್ಳುವ ಹಚ್ಚೆಯೋ ಅಂತಹದೇ ಇನ್ನೇನೋ ಆಕರ್ಷಕವೆನ್ನಿಸುವುದಾದರೆ.... ಅತಿಯಾಗಿ ಅಸಹಜವೆನ್ನಿಸುವ ರಂಗುಗಳು ತುಟಿ, ಉಗುರು, ಕೆನ್ನೆಗಳ ಮೇಲೆ ರಾರಾಜಿಸಿದರೆ... ಸಹಜ ಜೀವನಶೈಲಿಯಲ್ಲಿ ಸಾಧ್ಯವೇ ಆಗದಂತಹ ದೇಹದಾರ್ಢ್ಯತೆ ಕಾಪಾಡಿಕೊಳ್ಳುವುದೇ ಚಂದ ಎಂದು ಭಾವಿಸಿಕೊಂಡು ನಿರಂತರ ಮನೆಯ ಊಟ ತಿಂಡಿ ಬಿಟ್ಟು ಯಾವುದೋ ಜಿಮ್‌ಸೆಂಟರ್‌ಗಳು, ಕಂಪೆನಿಗಳು ಕೊಡುವ ಪ್ರೊಟೀನ್ ಪುಡಿಯನ್ನೇ ಸೇವಿಸುವುದು ಎಂದಾದರೆ..... ಫಿಟ್‌ನೆಸ್, ಸಿಕ್ಸ್ ಪ್ಯಾಕ್, 8 ಪ್ಯಾಕ್ ಎಂದು ಮಿತಿ ಮೀರಿ ಮಾಡುವ ಸರ್ಕಸ್‌ಗಳಲ್ಲೇ..... ಅದನ್ನು ಪಡೆಯುವುದಕ್ಕಾಗಿ ಸೇವಿಸುವ ಅನೇಕ ಮಾತ್ರೆಗಳು..... ಅನೇಕ ಸಂದರ್ಭಗಳಲ್ಲಿ ಚಟಗಳ ದಾಸರಾಗುವುದೂ ಸಹ ಇಂದಿನ ಸ್ಟೈಲ್ ಎಂದೇ, ಕೆಲವು ಮಾತ್ರೆಗಳನ್ನು ಸೇವಿಸಿದರೆ ಚರ್ಮದ ಕಾಂತಿ ಹೆಚ್ಚುತ್ತದೆ ಎಂಬ ಕಲ್ಪನೆಗಳಿಂದಲೇ.... ಜೀರೊ ಫಿಗರ್ ಹುಚ್ಚಿನಿಂದ ಆಹಾರವನ್ನೇ ಸೇವಿಸದೆ ಆರೋಗ್ಯ ಕೆಡಿಸಿಕೊಳ್ಳುವುದೇ ಚಂದ ಎಂದಾದರೆ..... ಯಾವುದೋ ಒಂದು ಬ್ರ್ಯಾಂಡ್ ಬಟ್ಟೆ ಧರಿಸುವುದೇ ಸ್ಟೈಲ್, ಅವನ್ನು ಪಡೆಯುವುದೇ ಬದುಕಿನ ಗುರಿ ಎಂದುಕೊಳ್ಳುವಷ್ಟು ಅವುಗಳ ದಾಸರಾಗುವುದು... ಇವೆಲ್ಲ ಸೌಂದರ್ಯ ಪ್ರಜ್ಞೆಯ ಆ ಕಲ್ಪನೆಯ ಇನ್ನೊಂದು ಪರಿ ಅಷ್ಟೆ.

ಅನೇಕರು ತಮ್ಮ ಮಿತಿಯೊಳಗೆ ಸೌಂದರ್ಯವನ್ನು ಕಾಣುವ ಪ್ರಯತ್ನಮಾಡಿ ಯಶಸ್ಸು ಕಾಣುತ್ತಾರೆ. ಇನ್ನು ಕೆಲವರು ಅಸಾಧ್ಯವಾದುದನ್ನು ಮಾಡುವ ಯತ್ನದೊಳಗೆ ಮಿತಿ ಮೀರಿ ಹಣ ವ್ಯಯಿಸಿ ಹಗಲು ರಾತ್ರಿ ಚಿಂತಿಸಿ ಅಸಾಧ್ಯವೆನಿಸಿದಾಗ ಭ್ರಮನಿರಸನಕ್ಕೊಳಗಾಗುತ್ತಾರೆ. ಇದು ವಿಪರೀತಕ್ಕೆಡೆ ಮಾಡುವುದೂ ಇದೆ? ಇಂತಹ ಸಂದರ್ಭದಲ್ಲಿ ಸೌಂದರ್ಯ ಎನ್ನುವುದು ನೋಡುವವನ ದೃಷ್ಟಿಯಲ್ಲಿರುವಂತಹದೇ ಹೊರತು ಅದು ನಮ್ಮ ಕೈಯಲ್ಲಿಲ್ಲ ಎಂಬ ಪ್ರಜ್ಞೆ ಇದ್ದಲ್ಲಿ ಒಳಿತು.

ಹೀಗಿದ್ದರೆ, ಸೌಂದರ್ಯದ ಮಾನದಂಡಗಳನ್ನು ನಿಗದಿಪಡಿಸುವವರು ಯಾರು? ನಿಜವಾಗಿ ಅದು ಪ್ರಾದೇಶಿಕ ಮಟ್ಟದಲ್ಲೇ ಬೆಳೆಯುವಂತಹದು. ನಮ್ಮ ಉಡುಗೆ ತೊಡುಗೆಗಳಲ್ಲಿ ಅವನ್ನು ಕಾಣುವುದು ಸಾಧ್ಯ. ಆದರೆ ಇಂದು ವಿಶ್ವಮಟ್ಟದಲ್ಲೇ ಸೌಂದರ್ಯದ ಮಾನದಂಡಗಳನ್ನು ನಿಗದಿಪಡಿಸಿ ಅದಕ್ಕಾಗಿ ಮಾರುಕಟ್ಟೆಗಳನ್ನು ಸೃಷ್ಟಿಸಿ ತಮ್ಮ ಉದ್ಯಮಗಳನ್ನು ಬೆಳೆಸಿಕೊಳ್ಳುವ ಕಂಪೆನಿಗಳಿವೆ. ಅವುಗಳು ಕಟ್ಟಿಕೊಡುವ ಸೌಂದರ್ಯದ ಕಲ್ಪನೆಯತ್ತ ನಮ್ಮ ಯುವಜನತೆ ಸಾಗುತ್ತದೆ.

ತಮ್ಮನ್ನು ತಾವು ರೂಪಿಸಿಕೊಳ್ಳುವುದಕ್ಕೆ ನಮ್ಮ ಯುವಜನತೆಗೆ ಆದರ್ಶಗಳು ಅಗತ್ಯ. ಆದರೆ ಇಂದಿನ ಆದರ್ಶಗಳನ್ನು ಕಟ್ಟಿಕೊಡುವುದು ಮಾಧ್ಯಮಗಳು. ಈ ಎಲ್ಲ ಪ್ರಯತ್ನಚಿಂತನೆಗಳಲ್ಲಿ ಮಾಧ್ಯಮಗಳ ಕೊಡುಗೆಯೇ ಬಹುಪಾಲು. ತಮ್ಮ ಇಷ್ಟದ ಸಿನೆಮಾ ನಟನಟಿಯರು ಯುವಕರ ಸೌಂದರ್ಯ ಚಿಂತನೆಗೆ ಹೆಚ್ಚಿನ ಪ್ರೇರಣೆಯನ್ನು ನೀಡುತ್ತಾರೆ. ಆ ನಟ ಹಾಗಿದ್ದಾನೆ, ನಾನೂ ಅವನ ಹಾಗೇ ಇರಬೇಕು, ಈ ನಟಿಯ ದೇಹದಂತೆ ನಾನೂ ಬಳುಕುತ್ತಿರಬೇಕು. ಆಕೆಯ ತಲೆಕೂದಲಿನಂತೆ ನನ್ನ ಕೂದಲನ್ನೂ ಕತ್ತರಿಸಿಕೊಳ್ಳಬೇಕು, ಬಣ್ಣ ಬಣ್ಣಗೊಳಿಸಬೇಕು, ಸ್ವಚ್ಛಂದ ಹಾರಿ ಬಿಡಬೇಕು. ಅವರಂತೆ ಬಟ್ಟೆ ಧರಿಸಬೇಕು, ನಮ್ಮ ಹಾವಭಾವ ಎಲ್ಲವೂ ಅವರಂತೆಯೇ ಇರಬೇಕು ಎಂದೆಲ್ಲಾ ಕಲ್ಪಿಸಿಕೊಂಡು ಬದಲಾಗುವ ಪ್ರಯತ್ನದಲ್ಲೇ ನಿರಂತರ ಸಾಗುತ್ತಾರೆ. ಇನ್ನು ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್‌ಗಳ ಪ್ರಭಾವವೂ ಇದೆ. ಅವರ ಈ ಪ್ರಯತ್ನಗಳನ್ನೆಲ್ಲ ಕಾಲಕಾಲಕ್ಕೆ ಅರ್ಥೈಸಿಕೊಂಡು ಅವರಿಗೆ ಸೂಕ್ತವಾಗುವ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದು ಹಣಮಾಡಿಕೊಳ್ಳುವ ಕಂಪೆನಿಗಳು ಕಡಿಮೆಯೇನಿಲ್ಲ. ದಿನದಿನಕ್ಕೆ ಬದಲಾಗುವ ಟ್ರೆಂಡ್‌ಗಳು, ಬದಲಾಯಿಸಲಾಗುವ ಟ್ರೆಂಡ್‌ಗಳು, ಟ್ರೆಂಡ್‌ಸೆಟ್ಟರ್‌ಗಳು.... ಅಂಗೈಯಲ್ಲೇ ಮೊಬೈಲ್ ಇಟ್ಟುಕೊಂಡು ಬೇಕೆಂದಾಗ ಖರೀದಿಸಿ ಅವುಗಳ ಹಿಂದೆ ಓಡುವ ಯುವಕರು..... ಛೇ ಎನ್ನಿಸುವಷ್ಟು.

ಮುಖ್ಯವಾಗಿ ಇಷ್ಟೆ. ಸೌಂದರ್ಯ ಎಂದುಕೊಂಡು ಬೇರೆಯವರನ್ನೇ ಅನುಕರಿಸುವ ಮಟ್ಟಕ್ಕೆ ನಮ್ಮ ಚಿಂತನೆ ಇರಬಾರದು. ತಮ್ಮ ಉಡುಗೆ ತೊಡುಗೆ ನಡವಳಿಕೆಗಳಲ್ಲಿ ನಮ್ಮ ವ್ಯಕ್ತಿತ್ವ ಪ್ರತಿಬಿಂಬವಾಗುತ್ತದೆ. ಸುಂದರವಾಗಿ ಕಾಣುವುದೇ ಬದುಕಿನ ಗುರಿಯಲ್ಲ, ಅದು ಹಾಗಾಗಬಾರದೂ ಕೂಡ. ಹೊರಗಿನ ದೇಹಸೌಂದರ್ಯವೇ ಎಲ್ಲವೂ ಅಲ್ಲ. ಅದನ್ನು ಮೀರಿದ ಸಾಧನೆಯೇ ನಿಜವಾದ ಸೌಂದರ್ಯ... ನಮ್ಮ ಯುವಜನತೆ ತಮ್ಮ ಚಿಂತನೆಯನ್ನು ಈ ಕಡೆಗೆ ಒಂದಿಷ್ಟು ತಿರುಗಿಸಿದರೆ ಬದುಕಿನ ಗುರಿಯನ್ನು ತಲುಪುವುದು ಕಷ್ಟವಲ್ಲ. ಆ ಕಡೆಗೆ ನಿರಂತರ ಪ್ರಯತ್ನವಿರಬೇಕು ಅಷ್ಟೆ.

ಹಾಗಿದ್ದರೆ ನಿಜವಾಗಿ ಸೌಂದರ್ಯವಿರುವುದು ಎಲ್ಲಿ? ನಮ್ಮ ವ್ಯಕ್ತಿತ್ವದಲ್ಲಿ... ಚಿಂತನೆಯಲ್ಲಿ.... ಜೀವನಶೈಲಿಯಲ್ಲಿ.... ಸಾಧನೆಯಲ್ಲಿ.... ಗುಣದಲ್ಲಿ.... ತಮ್ಮ ವೈಶಿಷ್ಟ್ಯವನ್ನು ಸಾಮರ್ಥ್ಯವನ್ನು ಗುರುತಿಸಿ ಅದನ್ನು ಬೆಳೆಸಿಕೊಳ್ಳುವತ್ತ ಗಮನಹರಿಸುವಲ್ಲಿ.... ಇದನ್ನೆಲ್ಲ ಅರಿತು ಬದುಕಿದರೆ ಬದುಕೆಷ್ಟು ಸುಂದರ... ಹೌದು ತಾನೆ..?